ಕೃಷಿ ವಿಶ್ವ ವಿದ್ಯಾನಿಲಯ
ಕೃಷಿ ಹವಾಮಾನ ವಿಭಾಗ
ಜಿ.ಕೆ.ವಿ.ಕೆ., ಬೆಂಗಳೂರು-560065

* ಗ್ರಾಮೀಣ ಕೃಷಿ ಹವಾಮಾನ ಸೇವಾ ವರದಿ ಪತ್ರಿಕೆ *

ದಿನಾಂಕ: 21.08.2015

ಬೆಂಗಳೂರು ಗ್ರಾಮಾಂತರ ಜಿಲ್ಲೆಗೆ ಸೀಮಿತವಾಗಿದೆ.

ಈ ವಾರದ ಮುನ್ಸೂಚನೆ (ದಿನಾಂಕ 22.08.15 –26.08.15 ವರೆಗೆ)

ನಿಯತಾಂಕಗಳು	22.08.15	23.08.15	24.08.15	25.08.15	26.08.15
ಮಳೆ (ಮಿ ಮಿ)	3	8	5	5	3
ಗರಿಷ್ಠ ಉಷ್ಣಾಂಶ(ಡಿ.ಸೆ.)	31	30	30	30	30
ಕನಿಷ್ಠ ಉಷ್ಣಾಂಶ (ಡಿ.ಸೆ.)	21	20	21	20	20
ಮೋಡ (ಪ್ರಮಾಣ)	6	6	7	6	7
ಅರ್ದ್ರತೆ ೭.೨೦ ಬೆ (ಶೇ)	88	88	89	88	86
ಅರ್ದ್ರತೆ ೨.೨೦ ಮ (ಶೇ)	61	58	65	64	58
ಗಾಳಿಯ ವೇಗ (ಕಿ.ಮಿ/ಗಂಟೆಗೆ)	5	5	4	5	5
ಗಾಳಿಯ ದಿಕ್ಕು (ಡಿಗ್ರಿ)	270	270	230	230	280

ಮುಂದಿನ ದಿನಗಳಲ್ಲಿ ಹಗುರ ಮಳೆಯಾಗುವ ಸಂಭವವಿದೆ. ದಿನದ ಗರಿಷ್ಠ ಉಷ್ಣಾಂಶ **30.0-31.0°C** ಮತ್ತು ಕನಿಷ್ಠ **20.0-21.0°C** ಇರುವ ಸಾಧ್ಯತೆ ಇದೆ. ಬೆಳಿಗಿನ ಆರ್ದ್ರತೆ ಪ್ರಮಾಣ ಶೇ **86-89 %** ಇದ್ದು ಮಧ್ಯಾಹ್ನ **58-65 %** ಇರುವುದು ಮತ್ತು ಗಾಳಿಯು ಗಂಟೆಗೆ ಸರಾಸರಿ **4-5** ಕಿ.ಮೀ. ವೇಗದಲ್ಲಿ ಬೀಸುವ ಸಂಭವವಿದೆ.

ಕೃಷಿ ಕಾರ್ಯಕ್ರಮಗಳ ಬಗ್ಗೆ ಅನುಸರಿಸಬೇಕಾದ ವಿವರ

ಜುಲೈ–ಆಗಸ್ಟ್ ತಿಂಗಳಲ್ಲಿ ಬಿತ್ತನೆ ಮಾಡಬೇಕಾದ ಬೆಳೆಗಳು:

- ಪೂರ್ವ ಒಣ ಪ್ರದೇಶಗಳಾದ ಬೆಂಗಳೂರು, ಕೋಲಾರ, ಚಿಕ್ಕಬಳ್ಳಾಪುರ ಮತ್ತು ತುಮಕೂರಿನ ಕೆಲವು ಭಾಗಗಳಲ್ಲಿ, ಜಿ.ಪಿ.ಯು–28, ಹೆಚ್.ಆರ್.–911 ರಾಗಿ ತಳಿಗಳನ್ನು ಬಿತ್ತನೆ ಮಾಡಬಹುದು. ಸೂರ್ಯಕಾಂತಿ ತಳಿಗಳಾದ ಮಾರ್ಡೆನ್, ಕೆ.ಬಿ.ಎಸ್.ಹೆಚ್–1, ಕೆ.ಬಿ.ಎಸ್.ಹೆಚ್–41, ಕೆ.ಬಿ.ಎಸ್.ಹೆಚ್–42, ಕೆ.ಬಿ.ಎಸ್.ಹೆಚ್–44, ಕೆ.ಬಿ.ಎಸ್.ಹೆಚ್–53 ತಳಿಗಳನ್ನು ಬಿತ್ತನೆ ಮಾಡಬಹುದು. ಶಕ್ತಿಮಾನ್ ಜೋಳದ ತಳಿಗಳಾದ ಡೆಕ್ಕನ್–103, ವಿಜಯ ಕಾಂಪೋಸಿಟ್ ಮತ್ತು ಗಂಗಾ–11 ತಳಿಗಳನ್ನು ಆಯ್ಕೆ ಮಾಡಿಕೊಳ್ಳಬಹುದು. ಅಲಸಂದೆ ಬೆಳೆಯಲ್ಲಿ ಸಿ–152 ಮತ್ತು ಕೆ.ಎಮ್–5, ಅಥವಾ ತರಕಾರಿಗಾಗಿ ಪಿ.ಕೆ.ಬಿ–4 ತಳಿಯನ್ನು ಆಯ್ಕೆ ಮಾಡಿಕೊಳ್ಳಬಹುದು.
- ತೇವಾಂಶದ ಸಂರಕ್ಷಣೆಗಾಗಿ ಮತ್ತು ಇರುವಂತಹ ಕಳೆ ನಿರ್ವಹಣೆಗೋಸ್ಕರ, ಒಂದೆರಡು ಬಾರಿ ಕುಂಟೆ ಹಾಯಿಸುವುದು.
- ಕಿತ್ತಂತಹ ಕಳೆ ಮತ್ತು ಬದುಗಳಲ್ಲಿ ಬೆಳೆದಿರುವ ಗ್ಲಿರೀಸಿಡಿಯ (ಹಸಿರೆಲೆ ಗೊಬ್ಬರದ ಗಿಡ) ಸೊಪ್ಪನ್ನು ಉಪಯೋಗಿಸಿಕೊಂಡು ಸಾಲುಗಳ ಮಧ್ಯದಲ್ಲಿ ಭೂ–ಹೊದಿಕೆಯಾಗಿ ಹರಡುವುದು.
- ಈಗಾಗಲೇ ಮೇ ಮತ್ತು ಜೂನ್ ತಿಂಗಳಲ್ಲಿ ಬಿತ್ತನೆ ಮಾಡಿರುವಂತಹ ದೀರ್ಘಾವಧಿ ಬೆಳೆಗಳಾದ ತೊಗರಿ, ಹರಳು ಬಿತ್ತನೆಯಾಗಿದ್ದಲ್ಲಿ ಮೇಲೆ ತಿಳಿಸಿರುವ ಬೇಸಾಯ ಕ್ರಮಗಳ ಜೊತೆಗೆ, ಸಾಲುಗಳ ಮಧ್ಯದಲ್ಲಿರುವ ಮಣ್ಣನ್ನು ಗಿಡದ ಬುಡಕ್ಕೆ ಹಾಕುವುದರಿಂದ ಭೂಮಿಯು ದಿಂಡು ಸಾಲಾಗಿ ಪರಿವರ್ತನೆಯಾಗುತ್ತದೆ ಇದರಿಂದ ಗಿಡಗಳಿಗೆ ಹೆಚ್ಚು ಸಿಗುವಂತಾಗಿ ಒಣಹವೆಯ ಅನಾನುಕೂಲತೆಯನ್ನು ಮುಂದೂಡಬಹುದು.
- ಎಲ್ಲೆಲ್ಲಿ ಶಿಫಾರಿಸಿಗಿಂತ ಹೆಚ್ಚು ಗಿಡಗಳ ಸಂಖ್ಯೆ ಇದೆಯೋ ಅಲ್ಲಿ ಬೆಳೆ ಸಸಿಗಳ ಸಂಖ್ಯೆಯನ್ನು ಕಡಿಮೆಗೊಳಿಸುವುದರಿಂದ ಮಣ್ಣಿನ ತೇವಾಂಶದ ಸದ್ಬಳಕೆ ಮಾಡಿಕೊಳ್ಳಬಹುದು.

ನೋಡಲ್ ಅಧಿಕಾರಿ:
ಕೃ.ವಿ.ವಿ, ಜಿ.ಕೆ.ವಿ.ಕೆ
ಬೆಂಗಳೂರು